1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.
ಎಸ್. ಸಿ. ಸಂಖ್ಯೆ: 05/2020

| | |
|---|---|
| ಪಿ.ಡಬ್ಲ್ಯೂ: | 03 |
| ಸಿ.ಡಬ್ಲ್ಯೂ: | 04 |
| ಪ್ರ.ಬೋ.ದಿನಾಂಕ: | 11-11-2021 |

| | | |
|---|---|---|
| ಹೆಸರು ಶ್ರೀ | :: | ಹೆಚ್ ಆರ್ ಉಮೇಶ |
| ತಂದೆಯ ಹೆಸರು | :: | ರೇವಣಸಿದ್ದಪ್ಪ |
| ವಯಸ್ಸು | :: | 39 ವರ್ಷ |
| ಉದ್ಯೋಗ | :: | ಬ್ಯಾಂಕ್ ನಲ್ಲಿ ಕೆಲಸ |
| ವಾಸ | :: | ಹರಿಹರ |

**ಮುಖ್ಯ ವಿಚಾರಣೆ:** ಮಾನ್ಯ ಸರ್ಕಾರಿ ಅಭಿಯೋಜಕರಿಂದ:

ಮೃತೆ ವಸಂತ ನನ್ನ ಅತ್ತೆಯ ಮಗಳು. ಪಿರ್ಯಾದಿ ಶ್ರೀನಿವಾಸ ಸದರಿ ವಸಂತರವರ ಗಂಡ. ಭಾವನಾ ಮತ್ತು ಅನುಷ್ಕಾ ಎನ್ನುವವರು ಇಬ್ಬರೂ ಅವರ ಮಕ್ಕಳು. ಇವರು ವಿನೋಬನಗರದಲ್ಲಿ ವಾಸಮಾಡುತ್ತಿದ್ದರು.

2. ಆರೋಪಿ ಪಿರ್ಯಾದಿಯ ಮನೆಯಲ್ಲಿ ಬಾಡಿಗೆದಾರನಾಗಿ ವಾಸಮಾಡುತ್ತಿದ್ದ. ಆರೋಪಿ ಲಾರಿ ಚಾಲಕನಾಗಿರುತ್ತಾನೆ. ಚಾಸಾ-1 ರವರು ನ್ಯೂಸ್ ಪೇಪರ್ ಅಂಗಡಿಗೆ ಹೋದ ನಂತರ ಆರೋಪಿ ಪಿರ್ಯಾದಿಯ ಮನೆಗೆ ಹೋಗಿ ದುಡ್ಡು ಕೊಡು, ಬಂಗಾರ ಕೊಡು ಎಂದು ವಸಂತಕುಮಾರಿಯ ಬಳಿ ಕೇಳುತ್ತಿದ್ದ. ಈ ಬಗ್ಗೆ ನಾವು 3 ಬಾರಿ ಪಂಚಾಯಿತಿ ಮಾಡಿದ್ದೇವೆ. ಆ ರೀತಿ ಪಂಚಾಯಿತಿ ಮಾಡಿ ಬುದ್ದಿವಾದ ಹೇಳಿದರು ಸಹ ಆರೋಪಿ ಅದೇ ರೀತಿ ತೊಂದರೆ ಕೊಡುತ್ತಿದ್ದರಿಂದ ಪಿರ್ಯಾದಿಗೆ ನಾವು ಬೇರೆ ಕಡೆ ಮನೆ ಮಾಡಿ ಎಂದು ಹೇಳಿದ್ದೇವು. ಅದರಂತೆ ಅವರು ಕುವೆಂಪು ನಗರದಲ್ಲಿ ಮನೆ ಮಾಡಿದ್ದರು. ಅಲ್ಲಿಗೂ ಸಹ ಆರೋಪಿ ಹೋಗಿ ಅವರಿಗೆ ತೊಂದರೆ ಕೊಡುತ್ತಿದ್ದ.

3. ದಿ:20.12.2018 ರಂದು ಸಂಜೆ ನನ್ನ ಸಂಬಂಧಿಕರು ಫೋನ್ ಮಾಡಿ ವಸಂತಕುಮಾರಿ ಮತ್ತು ಅವರ ಮಗಳು ನೇಣು ಹಾಕಿಕೊಂಡಿದ್ದರೆಂದು ವಿಷಯ ಗೊತ್ತಾಯಿತು. ಸದರಿ ವಿಷಯವನ್ನು ತಿಳಿದು ನಾನು ಕೂಡಲೇ ಮನೆಗೆ ಬಂದು ನೋಡಿದಾಗ ಅವರಿಬ್ಬರೂ ಮನೆಯ ಫ್ಯಾನ್ ಗೆ ನೇಣು ಹಾಕಿಕೊಂಡಿದ್ದರು. ನಂತರ ಪೊಲೀಸರು ಶವಗಳನ್ನು ಆಸ್ಪತ್ರೆಗೆ ಸಾಗಿಸಿದ್ದಾರೆ.

4. ಮಾರನೇ ದಿನ ಆಸ್ಪತ್ರೆಗೆ ಪೊಲೀಸರು ಬಂದು ಶವ ಪಂಚನಾಮೆ ಮಾಡಿದ್ದಾರೆ. ಆಗ ಸಮಯ ಬೆಳಿಗ್ಗೆ 8.00 ರಿಂದ 10.00 ಗಂಟೆ ಆಗಿತ್ತು. ನಾನು, ನನ್ನ ಸಂಬಂಧಿಕರು ಹಾಗೂ ಬೇರೆಯವರು ಆ ಸಮಯದಲ್ಲಿ ಇದ್ದೇವು. ಪೋಲೀಸರು ಶವ ಪಂಚನಾಮೆ ಸಮಯದಲ್ಲಿ ಪೋಟೋಗಳನ್ನು ತೆಗೆದಿದ್ದಾರೆ. ಸದರಿ ಪೋಟೋಗಳನ್ನು ಸಾಕ್ಷಿ ಗುರುತಿಸಿದ್ದು, ಅವುಗಳನ್ನು ನಿಪಿ-19 ರಿಂದ ನಿಪಿ-26 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಆರೋಪಿಯೇ ರಾಕೇಶ ಆಗಿರುತ್ತಾನೆ.

**<u>ಪಾಟೀ ಸವಾಲು ಆರೋಪಿ ಪರ ಶ್ರೀ ಸಿ ಟಿ ಹೆಚ್ ವಕೀಲರಿಂದಃ</u>**

5. ನಾವು 2-3 ಬಾರಿ ಪಂಚಾಯಿತಿ ಮಾಡಿದಾಗ ಪಂಚಾಯಿತಿದಾರರಾಗಿ ನಾನು, ಸಿದ್ದೇಶ, ನಾಗರಾಜ ಎನ್ನುವವರು ಸೇರಿದ್ದೇವು. ಸೆಪ್ಟೆಂಬರ್, ನವೆಂಬರ್ ತಿಂಗಳಿನಲ್ಲಿ ವಿನೋಬನಗರದ ಪಿರ್ಯಾದಿಯ ಮನೆಯಲ್ಲಿ ಪಂಚಾಯಿತಿ ಮಾಡಿದ್ದೇವೆ. ಸಾಕ್ಷಿಗೆ ಈ ವಿಷಯವನ್ನು ಆರೋಪಿ ಅಪ್ಪ ಅಮ್ಮನಿಗೆ ತಿಳಿಸಲು ಪ್ರಯತ್ನ ಪಟ್ಟರಾ ಎಂದರೆ ಸಾಕ್ಷಿ ಅವರು ನಮಗೆ ಸಿಕ್ಕಿಲ್ಲ ಎಂದು ನುಡಿದಿದ್ದಾರೆ. ನಾನು ಸ್ವತಃ ಪೊಲೀಸರಿಗೆ ಯಾವುದೇ ದೂರನ್ನು ಕೊಡಲು ಪ್ರಯತ್ನ ಮಾಡಿಲ್ಲ. ಪಿರ್ಯಾದಿಗೆ ದೂರು ಕೊಡಲು ನಾನು ಹೇಳಿದ್ದೇನೆ. ಬೇರೆ ಮನೆ ಮಾಡಿದಾಗ ಸದರಿ ವಿಷಯ ನನಗೆ ಗಮನಕ್ಕೆ ಬರಲಿಲ್ಲ ಆದರೆ ನೇಣು ಹಾಕಿಕೊಂಡಾಗ ಆ ವಿಚಾರ ಗೊತ್ತಾಗಿತ್ತು. ಆರೋಪಿ ಬಂದು ಹಣ ಮತ್ತು ಬಂಗಾರಕ್ಕಾಗಿ ಪೀಡಿಸುತ್ತಿದ್ದ ಈ ಬಗ್ಗೆ 2-3 ಬಾರಿ ಪಂಚಾಯಿತಿ ಮಾಡಿದ್ದೇವೆ ಎನ್ನುವ ವಿಚಾರ ಪೊಲೀಸರಿಗೆ ಹೇಳಿಲ್ಲ. ಪೊಲೀಸರು ಸ್ಥಳಕ್ಕೆ ಬಂದಿಲ್ಲ, ಪಂಚನಾಮೆ ಮಾಡಿಲ್ಲ, ಪೋಟೋ ತೆಗೆದಿಲ್ಲ ಎಂದರೆ ಸರಿಯಲ್ಲ. ಅವರಿಬ್ಬರ ಸಾವಿಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಪಿರ್ಯಾದಿ ನನ್ನ ಸಂಬಂಧಿಕಾರು ಆಗಿದ್ದರಿಂದ ಅವರ ಪರವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಪಿರ್ಯಾದಿ ತನ್ನ ಹೆಂಡತಿ ಮತ್ತು ಮಗಳಿಗೆ ಹಿಂಸೆ ಕೊಟ್ಟದ್ದರಿಂದ ಅವರಿಬ್ಬರೂ ನೇಣು ಹಾಕಿಕೊಂಡಿದ್ದಾರೆ ಎಂದು ಪ್ರಶ್ನಿಸಲಾಗಿ ಇಲ್ಲ ಎಂದು ನುಡಿದಿದ್ದಾರೆ.

ಮರುವಿಚಾರಣೆ ಇಲ್ಲ.

<u>(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)</u>

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.